ಬೆಲೆ ರೂ.2.50
Date of posting - 15th of every month at BPC Udupi.

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2024

ಶ್ರೀ ಶಾರದಾ ಪತ್ರಿಕೆಗೆ ರಜತ ಸಂಭ್ರಮ

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102. ☎ 0820-2958444, 8971185844

ಸಂಪುಟ-25 ಸಂಚಿಕೆ-4 ಪುಟಗಳು-6 Registered Under No.UDP/1260/2024-2026

## ಶ್ರೀ ಶಾರದಾ ಪತ್ರಿಕೆಗೆ 25ರ ಸಂಭ್ರಮ–ಒಂದು ಸಮಾಲೋಚನಾ ಸಭೆ



ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಇದರ ಮುಖವಾಣಿ ಶ್ರೀ ಶಾರದಾ ಪತ್ರಿಕೆಯ ರಜತ ಸಂಭ್ರಮವನ್ನು ಆಚರಿಸುವ ನಿಟ್ಟಿನಲ್ಲಿ ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಒಂದು ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಶ್ರೀ ಶಾರದಾ ಪತ್ರಿಕೆಯ ಹಿಂದಿನ ಸಂಚಿಕೆಯ ಮೂಲಕ ಹಾಗೂ ವಾಟ್ಸಪ್ ಮತ್ತು ಫೋನ್ ಕಾಲ್‌ಗಳ ಮುಖಾಂತರ ಹತ್ತುಹಲವು ಗಣ್ಯರನ್ನು ಸಭೆಗೆ ಆಹ್ವಾನಿಸಲಾಗಿತ್ತು.

ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಮಂಜುನಾಥ ಹೆಬ್ಬಾರ್‌ರ ಅಧ್ಯಕ್ಷತೆಯಲ್ಲಿ ನಡೆದ ಸಮಾಲೋಚನಾ ಸಭಾ ವೇದಿಕೆಯಲ್ಲಿ ಸಂಘದ ಕಾರ್ಯದರ್ಶಿ ಪ್ರಭಾಕರ ಭಂಡಿ, ಕೋಶಾಧಿಕಾರಿ ಗಣೇಶ್ ಹೆಬ್ಬಾರ್ ಮತ್ತು ಶ್ರೀ ಶಾರದಾ ಪತ್ರಿಕೆಯ ಪ್ರಧಾನ ಸಂಪಾದಕರಾದ ಅರವಿಂದಕುಮಾರ್ ಉಪಸ್ಥಿತರಿದ್ದರು.

ಅರವಿಂದಕುಮಾರ್ ಎಲ್ಲರನ್ನು ಸ್ವಾಗತಿಸುತ್ತಾ, ಪತ್ರಿಕೆಯನ್ನು ಪ್ರಾರಂಭದಿಂದ ಇಂದಿನವರೆಗೆ ಮುನ್ನಡೆಸಿದ ಎಲ್ಲರನ್ನು ಸ್ಮರಿಸಿದರು. ಹಾಗೆಯೇ ಪತ್ರಿಕೆಯ ಪ್ರಾರಂಭದ ದಿನಗಳ ಕಷ್ಟಕಾರ್ಪಣ್ಯಗಳನ್ನು ನೆನಪಿಸಿಕೊಂಡರು. ಹಿರಿಯರ ಮಾರ್ಗದರ್ಶನ, ಸಂಘದ ಹಿಂದಿನ ಪದಾಧಿಕಾರಿಗಳ ಪ್ರೋತ್ಸಾಹ, ಪತ್ರಿಕೆಯ ಜಾಹಿರಾತುದಾರರ ಸಹಕಾರ, ಮಹಾಪೋಷಕರು ಮತ್ತು ಸರ್ವಸದಸ್ಯರ ಬೆಂಬಲ, ಪತ್ರಿಕೆಗೆ ಬೇರೆಬೇರೆ ಲೇಖನಗಳನ್ನು ಕಾಲ ಕಾಲಕ್ಕೆ ಕಳುಹಿಸಿದ ಸಹೃದಯ ಲೇಖಕರ ಆಶೀರ್ವಾದ, ಪತ್ರಿಕೆಯ ಓದುಗರ ಮೆಚ್ಚುಗೆಯ ನುಡಿಗಳಿಂದ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಈ ಪತ್ರಿಕೆಯು ನಿರಂತರ ನಡೆಯುತ್ತಿದೆ. ಇಂತಹ ಪತ್ರಿಕೆಯ ರಜತ ಸಂಭ್ರಮವನ್ನು ಆಚರಿಸುವುದಕ್ಕಾಗಿ ಸೂಕ್ತ ಸಲಹೆಗಳನ್ನು ನೀಡಬೇಕೆಂದು ಕರೆ ನೀಡಿದರು. ಪತ್ರಿಕೆಗೆ ವಾರ್ಷಿಕವಾಗಿ ಬರುವ ಖರ್ಚುವೆಚ್ಚ ಹಾಗೂ ಪತ್ರಿಕೆಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸಂಘದ ಕೋಶಾಧಿಕಾರಿ ಗಣೇಶ್ ರಾವ್ ವಿವರಣೆ ನೀಡಿದರು. ಪತ್ರಿಕೆಯ ಅಸ್ತಿತ್ವ, ರಿಜಿಸ್ಟ್ರೇಶನ್ ಬಗ್ಗೆ ಆಗಿರುವ ಕೆಲಸಕಾರ್ಯಗಳ ಬಗ್ಗೆ ಕಾರ್ಯದರ್ಶಿ ಪ್ರಭಾಕರ ಭಂಡಿ ಮಾಹಿತಿ ನೀಡಿದರು. ಪತ್ರಿಕೆಯ ಪ್ರಾರಂಭದಿಂದಲೂ ಅದರ ಕೆಲಸ ಕಾರ್ಯಗಳನ್ನು ನಿರ್ವಹಿಸಿದ್ದ ಕೃಷ್ಣಕುಮಾರ್‌ರಾವ್ ಮಟ್ಟು ಈ ರಜತ ವರ್ಷದಲ್ಲಿ ನಡೆಯುವ ಸಮಾರಂಭದಲ್ಲಿ ಪತ್ರಿಕೆಯ ಮುದ್ರಣ ಕಾರ್ಯದಲ್ಲಿ ಈವರೆಗೆ ನಿರಂತರವಾಗಿ ಸಹಾಯ ಮಾಡಿದ ಎಲ್ಲರನ್ನು ಗೌರವಿಸುವ ಕಾರ್ಯ ಮಾಡಬಹುದು. ಸಮಾರೋಪ ಸಮಾರಂಭವನ್ನು ಈ ವರ್ಷದ ಸೆಪ್ಟಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಒಂದು ದಿನದ ಕಾರ್ಯಕ್ರಮವಾಗಿ ಸಂಭ್ರಮದಿಂದ ಆಚರಿಸಬಹುದೆಂದು ಸಲಹೆ ನೀಡಿದರು. ಸಂಘದ ಮಾಜಿ ಅಧ್ಯಕ್ಷರಾದ ವೈ. ಭುವನೇಂದ್ರರಾವ್ ಮಾತನಾಡುತ್ತಾ ಪತ್ರಿಕೆಯನ್ನು ವಿಶೇಷ ಸಂಚಿಕೆಯನ್ನಾಗಿ ಬಿಡುಗಡೆ ಮಾಡಬಹುದು, ಅದರಲ್ಲಿ ಪತ್ರಿಕೆಯು ನಡೆದು ಬಂದ ದಾರಿಯನ್ನು ವಿವರಿಸಬಹುದು, ಹಿಂದಿನ ಸಂಚಿಕೆಗಳಲ್ಲಿ ಮುದ್ರಿಸಿದ್ದ ಪ್ರಮುಖ ಸುದ್ದಿಗಳನ್ನು ಹೈಲೈಟ್ ಮಾಡಿ ಮರುಪ್ರಕಟಿಸಬಹುದು, ಬೇರೆ ಬೇರೆ ಸಂಘ ಹೀಗೆ ಸಂಸ್ಥೆಗಳಿಂದ, ವ್ಯಕ್ತಿಗಳಿಂದ ಪತ್ರಿಕೆಯ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ ಅದನ್ನು ಪ್ರಕಟಿಸುವುದು. ಹೀಗೆ ಹಲವಾರು ಸಲಹೆಗಳನ್ನು ನೀಡಿದರು. ಪತ್ರಿಕೆಯ ಹಿಂದಿನ ಪ್ರಧಾನ ಸಂಪಾದಕರಾಗಿದ್ದ ಡಾ। ವೈ. ಸುದರ್ಶನ್ ರಾವ್ ರಜತ ಸಂಭ್ರಮದ ಸಂದರ್ಭದಲ್ಲಿ ಸ್ಮರಣ ಸಂಚಿಕೆಯೊಂದನ್ನು ಹೊರತರುವುದು, ಈ ವರ್ಷದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಆಕರ್ಷಕ ಬಹುಮಾನಗಳನ್ನು ಘೋಷಿಸುವುದು, ಈ ವರ್ಷದಲ್ಲಿ 25 ಮಹಾಪೋಷಕರನ್ನು ಹೊಸದಾಗಿ ಸೇರ್ಪಡೆಗೊಳಿಸಲು ಪ್ರಯತ್ನಿಸುವುದು, ಈ ಎಲ್ಲಾ ವಿಚಾರಗಳಿಗೆ ಬೇರೆ ಬೇರೆ ಸಮಿತಿಗಳನ್ನು ರಚಿಸಬಹುದೆಂದು ತಿಳಿಸಿದರು.

ವಿಶ್ವನಾಥ ಶ್ಯಾನುಭಾಗ್ ಸ್ಮರಣ ಸಂಚಿಕೆಗೆ ಜಾಹೀರಾತು ಸಂಗ್ರಹಿಸುವುದು, ಚಂದಾದಾರರಿಗೆ ಪತ್ರಿಕೆ ತಲುಪುವುದಿಲ್ಲ ಎಂಬ ನ್ಯೂನತೆ ಸರಿಪಡಿಸುವುದು, ಪ್ರತಿ ಜಾಹೀರಾತುದಾರರಿಗೂ ಪತ್ರಿಕೆ ತಲುಪಬೇಕೆಂದು ಸಲಹೆ ನೀಡಿದರು. ಪತ್ರಿಕೆಯ ರಜತ ಸಂಭ್ರಮದ ಆಚರಣೆಗಾಗಿ ಲೋಗೋ ಹಾಗೂ ವೀಡಿಯೋ ಬಿಡುಗಡೆಮಾಡಬಹುದೆಂಬ ಸಲಹೆ ಬಂತು.

ನಂತರ ಪತ್ರಿಕೆಯ ರಜತೋತ್ಸವ ಸಮಿತಿಯೊಂದನ್ನು ರಚಿಸಲಾಯಿತು.

ಅಧ್ಯಕ್ಷರು – ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ – ಪ್ರಭಾಕರ ಭಂಡಿ, ಕೋಶಾಧಿಕಾರಿ – ಗಣೇಶ್ ಹೆಬ್ಬಾರ್, ಸಂಚಾಲಕರು – ಕೃಷ್ಣಕುಮಾರ್‌ರಾವ್ ಮಟ್ಟು, ಸದಸ್ಯರು – ವೈ.ಭುವನೇಂದ್ರ ರಾವ್, ಯು.ಅರವಿಂದ ಕುಮಾರ್, ಡಾ। ವೈ.ಎಸ್.ರಾವ್, ಸಿ.ಎಸ್.ರಾವ್ ಚಿಟ್ಪಾಡಿ, ಐ.ಕೆ.ಜಯಚಂದ್ರ, ವೈ.ಪ್ರಕಾಶ್ ಕುಮಾರ್, ಕೃಷ್ಣಮೂರ್ತಿ ರಾವ್ ಅಂಬಲಪಾಡಿ, ಉಮೇಶ್ ರಾವ್ ಕೆ, ಸತೀಶ್‌ರಾವ್ ಚಿಟ್ಪಾಡಿ, ಸುರೇಶ್ ರಾವ್ ಕುತ್ಪಾಡಿ, ಸತೀಶ್ ರಾವ್ ದೊಡ್ಡಣಗುಡ್ಡೆ, ದಿವಾಕರ್ ರಾವ್ ಚೊಕ್ಕಾಡಿ, ವಿಶ್ವನಾಥ್ ಶ್ಯಾನುಭಾಗ್, ಡಾ। ಸಂತೋಷ್ ಕುಮಾರ್, ವಸಂತ್ ರಾವ್ ಕೇದಿಗೆ, ಮಧುಸೂದನ ರಾವ್, ಜಯರಾಮ ರಾವ್, ಡಾ। ವಿಜಯಾ ರಾವ್, ಪ್ರೀತಿಮಾಲಾ ಎಸ್ ರಾವ್, ಪ್ರಕಾಶ್ ರಾವ್ ಕೋಲ್ಪೆ, ಸುರೇಶ್ ರಾವ್ ಬೆಳ್ಮಣ್, ವಿನೋದ್ ರಾವ್, ಅಜಿತ್ ರಾವ್

**ಸ್ಮರಣ ಸಂಚಿಕೆ ಸಮಿತಿ :** ವೈ.ಭುವನೇಂದ್ರ ರಾವ್ (ಪ್ರದಾನ ಸಂಪಾದಕರು), ಡಾ। ವೈ.ಎಸ್.ರಾವ್ (ಸಂಪಾದಕರು), ಕೃಷ್ಣಕುಮಾರ್ ರಾವ್ ಮಟ್ಟು (ಸಂಪಾದಕರು), ಅರವಿಂದ ಕುಮಾರ್ (ಸಂಪಾದಕರು), ವಿಶ್ವನಾಥ ಶ್ಯಾನುಭಾಗ್ **ಜಾಹೀರಾತು ಸಮಿತಿ :** ಅಜಿತ್ ರಾವ್, ಜಯರಾಮ ರಾವ್, ಸತೀಶ್ ರಾವ್ ಚಿಟ್ಪಾಡಿ, ವಿನೋದ್ ರಾವ್ **ಸ್ಪರ್ಧಾ ಸಮಿತಿ :** ಡಾ। ವಿಜಯಾರಾವ್, ಪ್ರೀತಿಮಾಲಾ ಎಸ್ ರಾವ್, ಸುರೇಶ್ ರಾವ್ ಬೆಳ್ಮಣ್ಣು, ಉಮೇಶ್ ರಾವ್ ಕೆ, ಮಧುಸೂದನ ರಾವ್, ಡಾ। ಸಂತೋಷ್ ಕುಮಾರ್

ಸ್ಮರಣ ಸಂಚಿಕೆಯ ಡಿಸೈನಿಂಗ್ ಕೆಲಸವನ್ನು ವಿಶ್ವನಾಥ್ ಶ್ಯಾನುಭಾಗ್ ಮಾಡಿಕೊಡುತ್ತೇನೆಂದು ಒಪ್ಪಿಕೊಂಡರು. ಹಾಗೆಯೇ ಪತ್ರಿಕೆಯ ಹಾಗೂ ಸಮಗ್ರ ಮಾಹಿತಿಯನ್ನು ವೆಬ್‌ಸೈಟೀಕರಣ ಮಾಡುವ ಕ್ರಿಯೆಯನ್ನು ವಸಂತ್ ರಾವ್ ಕೇದಿಗೆಯವರು ಮಾಡುವೆನೆಂದು ಹೇಳಿದರು. ನಂತರ ಅಧ್ಯಕ್ಷೀಯ ಭಾಷಣ ಮಾಡಿದ ಮಂಜುನಾಥ ಹೆಬ್ಬಾರ್ ರಜತ ಸಂಭ್ರಮವನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಆಚರಿಸುವುದಕ್ಕಾಗಿ ಬರುವ ಎಲ್ಲಾ ಯೋಜನೆಗಳನ್ನು ಸ್ವೀಕರಿಸೋಣ. ಎಲ್ಲರೂ ಜೊತೆಯಾಗಿ ನಿಂತು ಸಂಭ್ರಮವನ್ನು ಹೆಚ್ಚಿಸೋಣ ಎಂದು ಹಾರೈಸಿದರು.

ಕೊನೆಯಲ್ಲಿ ವಿಶ್ವನಾಥ ಶ್ಯಾನುಭಾಗ್ ಧನ್ಯವಾದ ಸಮರ್ಪಣೆ ಮಾಡಿದರು. ಕೃಷ್ಣಕುಮಾರ್‌ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆಗೊಳಿಸಿದ್ದರು.


## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-2.

ಶ್ರೀ ಶಾರದಾ ಮಂಟಪದಲ್ಲಿ

**ಸಾಮೂಹಿಕ ಉಪನಯನವು**

ತಾ.03-05-2024ನೇ ಶುಕ್ರವಾರ ಜರುಗಲಿದೆ.
ಉಪನಯನದಲ್ಲಿ ಪಾಲ್ಗೊಳ್ಳುವ ವಟುಗಳ ವಿವರಗಳನ್ನು ತಾ.30.04.2024ರೊಳಗೆ ಸಂಘದ ಕಾರ್ಯದರ್ಶಿ ಪ್ರಭಾಕರ ಭಂಡಿ (9449254846), ಮೆನೇಜರ್ ಅಜಿತ್ ರಾವ್ (9448108920) ಇವರಿಗೆ ಸಲ್ಲಿಸಬಹುದು.



ಶ್ರೀ ಶಾರದಾ ದೇವಸ್ಥಾನದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆ**

ತಾ.12-05-2024ನೇ ಆದಿತ್ಯವಾರ ನೆರವೇರಲಿದೆ.
ಕಾರ್ಯಕ್ರಮಗಳ ವಿವರ : ಬೆಳಿಗ್ಗೆ 8-30 ಗಂಟೆಗೆ ಪ್ರಾರ್ಥನೆ
ಶ್ರೀ ಶಂಕರ ಅಷ್ಟೋತ್ತರ ಪಾರಾಯಣ, ಶ್ರೀ ಶಂಕರ ವಿಜಯ ಪಾರಾಯಣ,
ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ, ಪೂಜೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಮಹಾಪೂಜೆ ನಡೆಯಲಿದೆ.
ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ

-ಆಡಳಿತ ಮಂಡಳಿ


## ಶ್ರೀ ಶಾರದಾ ಪತ್ರಿಕೆಯ ರಜತ ಮಹೋತ್ಸವದ ಪ್ರಯುಕ್ತ ವಿವಿಧ ಸ್ಪರ್ಧೆಗಳು

ಶ್ರೀ ಶಾರದಾ ಪತ್ರಿಕೆಯ ರಜತ ಮಹೋತ್ಸವದ ಸಂದರ್ಭದಲ್ಲಿ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ಓದುಗರಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲು ಸ್ಪರ್ಧಾ ಸಮಿತಿ ನಿರ್ಣಯಿಸಿದೆ. ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರತೀ ತಿಂಗಳ ಸ್ಪರ್ಧೆಗಳ ವಿವರಗಳನ್ನು ಪ್ರಕಟಿಸಲಾಗುವುದು. ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಅಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ಈ ತಿಂಗಳ ಪ್ರಬಂಧ ಹಾಗೂ ಕವನ ಸ್ಪರ್ಧೆಗಳು**

1) 13ರಿಂದ 18 ವರ್ಷದವರಿಗೆ 500 ಶಬ್ಧಗಳಿಗೆ ಮೀರದಂತೆ ಪ್ರಬಂಧ – ವಿಕಸಿತ ಭಾರತ – 2047ಕ್ಕೆ ಯುವಕರ ಪಾತ್ರ.
2) 19ರಿಂದ 22 ವರ್ಷದವರಿಗೆ ಕವನ ಸ್ಪರ್ಧೆ 4 ಸಾಲುಗಳ 4 ಚರಣಗಳಲ್ಲಿ – "ಶ್ರೀ ಶಾರದಾ" ಪತ್ರಿಕೆ ನಾ ಕಂಡಂತೆ.

ಆಸಕ್ತರು ತಾ.30.04.2024ರ ಒಳಗೆ ಡಾ। ವೈ.ಬಿ.ವಿಜಯ ರಾವ್ (9448164327), ಪ್ರೀತಿಮಾಲಾ (9901724369) ಸ್ಪರ್ಧಾ ಸಮಿತಿ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಇವರಿಗೆ ಕಳುಹಿಸಬಹುದು.

# ಉದ್ಯಾವರದ ಹಿಂದೂ ಶಾಲೆಗೆ ಶ್ರೀ ಬಿ ಜಯರಾಮ್ ರಾವ್ ದಂಪತಿಗಳ ಭೇಟಿ

ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಶ್ರೀ ಬಿ ಜಯರಾಮ್ ರಾವ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಅಧಿಕಾರಿ ಶ್ರೀಮತಿ ವೀಣಾ ಜಯರಾಮ್ ದಂಪತಿಗಳು ಉದ್ಯಾವರದ ಹಿಂದೂ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು. ಈ ಕನ್ನಡ ಮಾಧ್ಯಮ ಶಾಲೆಯ ಮಕ್ಕಳ ಸಂಖ್ಯೆ, ಶಾಲಾ ವಿದ್ಯಾರ್ಥಿಗಳಿಗೆ ಸಿಗುತ್ತಿರುವ ಸೌಲಭ್ಯಗಳು, ಶಾಲೆಯ ಅಭಿವೃದ್ಧಿಗಾಗಿ ಶಾಲಾಡಳಿತ



ಮಂಡಳಿಯ ದೂರದೃಷ್ಟಿ, ಮತ್ತು ಶಾಲಾ ಶಿಕ್ಷಕ ವೃಂದದ ನಿರಂತರ ಶ್ರಮ ಮೊದಲಾದುವುಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದಲ್ಲದೆ ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಶಾಲಾ ವಿದ್ಯಾರ್ಥಿಗಳ ಚಟುವಟಿಕೆಗಳಿಗೆ ನೆರವಾಗುವಂತೆ ಸಹಾಯಧನದ ಚೆಕ್‌ನ್ನು ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಹೇಮಲತಾರವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಗಣಪತಿ ಕಾರಂತ್, ಆಡಳಿತಮಂಡಳಿಯ ಸದಸ್ಯ ಕೃಷ್ಣಕುಮಾರ್ ರಾವ್ ಮಟ್ಟು, ಸಹಶಿಕ್ಷಕಿ ಶ್ರೀಮತಿ ಅನುರಾಧಾ ಪ್ರವೀಣ್ ಉಪಸ್ಥಿತರಿದ್ದರು.


**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
**** ****

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ


# ಪ್ರದ್ಯುಮ್ನ ಇವರಿಗೆ ಗಾಲ್ಫ್ ಟೂರ್ನಮೆಂಟ್‌ನಲ್ಲಿ ದ್ವಿತೀಯ ಸ್ಥಾನ



ರಾಜಸ್ಥಾನ್ ಮತ್ತು ಗುಜರಾತ್‌ನ ಬಾರ್ಡರ್ ಜೆಸಲ್ಮೀರ್‌ನಲ್ಲಿರುವ ನಮ್ಮ ಸಮಾಜ ಬಾಂಧವರಾದ ವಿವೇಕ್ (ಕಳಸ ಮೂಲದವರು) ಮಗ ಪ್ರದ್ಯುಮ್ನರವರು ಶುಬಾಂಕೂರ್ ಶರ್ಮಾ ಆಲ್ ಇಂಡಿಯಾ ಓಪನ್ ಗಾಲ್ಫ್ ಟೂರ್ನಮೆಂಟ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಅಲ್ಲದೆ ಮುಂದೆ ಡಿಸೆಂಬರ್‌ನಲ್ಲಿ ನಡೆಯುವ ಪಂದ್ಯಕ್ಕೆ ಆಯ್ಕೆ ಆಗಿರುತ್ತಾರೆ. ಈ ನಮ್ಮ ಹೆಮ್ಮೆಯ ಸ್ಥಾನಿಕನಿಗೆ ನಮ್ಮೆಲ್ಲರ ಒಂದು ಪ್ರೀತಿಯ ಮೆಚ್ಚುಗೆ ಇರಲಿ, ಜೊತೆಗೆ ಮುಂದೆ ನಡೆಯುವ ಸ್ಪರ್ಧೆಯಲ್ಲಿ ಈತ ಜಯಗಳಿಸಿ ನಮ್ಮ ಊರಿನ ಮತ್ತು ನಮ್ಮ ಸಮಾಜದ ಕೀರ್ತಿ ಪತಾಕೆಯನ್ನು ಹಾರಿಸಲಿ ಎಂದು ಶುಭ ಹಾರೈಸೋಣ.



ತಾ.21.03.2024ರಂದು ಶಾರದಾ ಭಜನಾ ಮಂಡಳಿಯವರಿಂದ ಮಲ್ಪೆ ವಡಭಾಂಡೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶ ಪ್ರಯುಕ್ತ ಭಜನಾ ಕಾರ್ಯಕ್ರಮ ಜರಗಿತು.



ವಸಂತ ನವರಾತ್ರಿಯ ಪ್ರಯುಕ್ತ ಶಾರದಾ ಭಜನಾ ಮಂಡಳಿ ಉಡುಪಿ ಇವರ ವತಿಯಿಂದ ತಾ.09.04.2024 ರಿಂದ 17.04.2024ರವರೆಗೆ ಪ್ರತಿದಿನ ಶ್ರೀ ಲಲಿತಾಸಹಸ್ರನಾಮ ಪಾರಾಯಣ ಮತ್ತು ಅರ್ಚನೆ ಕಾರ್ಯಕ್ರಮವು ಜರಗಲಿರುವುದು.


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.50%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 5 ವರ್ಷದ ತನಕ | : 9% |
| 5 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016-17ರಿಂದ 2021-22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☏ 2522408) ಪಡುಬಿದ್ರಿ ಶಾಖೆ (☏ 2556608) ಕೋಟೇಶ್ವರ ಶಾಖೆ (☏ 9341854114) ಬ್ರಹ್ಮಾವರ ಶಾಖೆ (☏ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ


## ಪಡುಬಿದ್ರಿಯ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನ
# ಮೊದಲ ಹಂತದ ಯೋಜನೆಗೆ ಚಾಲನೆ



ಪಡುಬಿದ್ರಿಯ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶ್ರೀ ವಿಷ್ಣುಮೂರ್ತಿ ಮತ್ತು ಉಪದೇವರುಗಳ ಗರ್ಭಗುಡಿಯ ದ್ವಾರ ಮತ್ತು ಬಾಗಿಲುಗಳು, ಗರ್ಭಗುಡಿಯ ಹೊರಮೈ ಹಾಗೂ ತೀರ್ಥಮಂಟಪ ಮತ್ತು ದೇವಸ್ಥಾನದ ಮುಖ್ಯ ದ್ವಾರಕ್ಕೆ ಹಿತ್ತಾಳೆ ಮೆರುಗನ್ನು ಕೊಡುವರೇ ರೂ. 14ಲಕ್ಷದ ಯೋಜನೆಯೊಂದು ಸಿದ್ಧವಾಗಿದ್ದು, ಅದರಲ್ಲಿ ಮೊದಲ ಹಂತದ 9 ಲಕ್ಷದ ಯೋಜನೆಯನ್ನು ಕಾರ್ಯಗತಗೊಳಿಸುವರೇ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರೀಯವರು ಮಾರ್ಚ್ 13 ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಸಮಾಜ ಬಾಂಧವರು ಹಾಗೂ ಭಕ್ತಾಭಿಮಾನಿಗಳ ಸಮ್ಮುಖದಲ್ಲಿ ದೇವರಲ್ಲಿ ಪ್ರಾರ್ಥಿಸಿ, ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪಡುಬಿದ್ರಿ ಬೀಡಿನ ರತ್ನಾಕರರಾಜ ಅರಸು ಕಿನ್ಯಕ್ಕ ಬಲ್ಲಾಳ್,, ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷರಾದ ಬಿ. ಜಯರಾಮ ರಾವ್, ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಇದರ ಅಧ್ಯಕ್ಷರಾದ ಎಂ.ಕೆ. ಮೋಹನ್ ರಾವ್ ಹಾಗೂ ಅನೇಕ ಸಮಾಜ ಬಾಂಧವರು ಮತ್ತು ಭಗವದ್ಭಕ್ತರು ಪಾಲ್ಗೊಂಡರು.




ತಾ.23.03.2024 ರಂದು ಸಂಜೆ 5.00 ಗಂಟೆಗೆ ಶ್ರೀ ಬಾಲಗಣಪತಿ ದೇವರ ಬಲಿ ಮೂರ್ತಿಯ ರಜತ ಪ್ರಭಾವಳಿಯ donation couponನನ್ನು ಕಾಪು ಕ್ಷೇತ್ರದ ಶಾಸಕರಾದ ಶ್ರೀ ಗುರ್ಮೆ ಸುರೇಶ್ ಶೆಟ್ಟಿಯವರು ಬಿಡುಗಡೆಗೊಳಿಸಿದರು.

# ಪ್ರೊ. ಶ್ರೀಕಾಂತ್ ರಾವ್ ಎಸ್. ಕೆ. ಅವರಿಗೆ ಡಾಕ್ಟರೇಟ್ ಪದವಿ



ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಪ್ರೊ. ಶ್ರೀಕಾಂತ್ ರಾವ್ ಎಸ್. ಕೆ. ಅವರು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ಕಂಪ್ಯೂಟರ್ ಎಯ್ಡೆಡ್ ಡಯಾಗ್ನೋಸಿಸ್ ಆಫ್ ಏಟ್ರಿಯಲ್ ಫೈಬ್ರಿಲ್ಲೇಶನ್ ಯೂಸಿಂಗ್ ಮೆಷಿನ್ ಲರ್ನಿಂಗ್ ಎಪ್ರೋಚ್ ಎಂಬ ವಿಷಯದ ಬಗ್ಗೆ ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿಯ ಅಸೋಸಿಯೇಟ್ ಪ್ರೊಫೆಸರ್ ಡಾ। ರೋಶನ್ ಜಾಯ್ ಮಾರ್ಟಿಸ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಿದ್ದಾರೆ. ಇವರು ಶರವೂರು ಕುಟುಂಬದವರು. ಇವರ ಬಾಳ ಸಂಗಾತಿ ವಿಷ್ಮ ಬಿಕ್ಕೋಡಿನವರು.

**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

ಪೆರ್ಡೂರಿನ ಗೋರೆಲ್‌ನಲ್ಲಿ ಶ್ರೀಮತಿ ಕುಸುಮ ಹಾಗೂ ಪಿ. ಹರಿನಾರಾಯಣ ಭಂಡಿ, ಪೆರ್ಡೂರು ಇವರ ನೂತನ ಗೃಹಪ್ರವೇಶ "ಓಂ ಪಂಚಶ್ರೀ" ಪ್ರಯುಕ್ತ
ತಾ.03.05.2024ನೇ ಶುಕ್ರವಾರ ಸಂಜೆ ಗಂಟೆ 6.30ರಿಂದ
ಶ್ರೀ ಪೆರ್ಡೂರು ಮೇಳದವರಿಂದ ಕಾಲಮಿತಿ ಯಕ್ಷಗಾನ ಬಯಲಾಟ

## ಗಂಗೆ ತುಂಗೆ ಕಾವೇರಿ

ಸರ್ವರಿಗೂ ಆದರದ ಸ್ವಾಗತ

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮಂಗಳೂರು (ರಿ)
## ವೈದಿಕ ಶಿಬಿರ

ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮಂಗಳೂರು (ರಿ). ಇದರ ಪ್ರಾಯೋಜಕತ್ವದಲ್ಲಿ, ನಮ್ಮ ಸಮಾಜದ ಎಲ್ಲಾ 19 ಸಂಘದಲ್ಲಿ ಮೇ 12 ರಿಂದ ಮೇ 21ರವರೆಗೆ ವೈದಿಕ ಶಿಬಿರಗಳನ್ನು ಆಯಾಯ ಸಂಘದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಶಿಬಿರದಲ್ಲಿ ನಿತ್ಯ ಸಂಕ್ಷಿಪ್ತ ಜಪ ಮತ್ತು ನಿತ್ಯ ಸಂಕ್ಷಿಪ್ತ ಪಂಚಾಯತನ ಪೂಜಾ ಪದ್ಧತಿಗಳ ಕುರಿತು ಮಾಹಿತಿ ಹಾಗೂ ತರಬೇತಿಯನ್ನು ನೀಡಲಾಗುವುದು.

ಎಲ್ಲಾ ಸಂಘದವರು ಈ ಕೆಳಗಿನ ನಿಯಮ ಪಾಲಿಸುವುದು :

1) ಶಿಬಿರದ ಸ್ಥಳ 2) ನಿಮ್ಮ ಸಂಘದಿಂದ ಒಬ್ಬ ಪ್ರಮುಖರನ್ನು ನೇಮಿಸುವುದು 3) ಶಿಬಿರಾರ್ಥಿಗಳನ್ನು ಸಂಪರ್ಕಿಸಿ ಒಟ್ಟು ಸಂಖ್ಯೆ ಖಾತ್ರಿ ಪಡಿಸಿಕೊಳ್ಳುವುದು. 4) ನಿಮ್ಮ ಪರಿಸರದ ಒಬ್ಬರು ಪುರೋಹಿತರನ್ನು ನೇಮಿಸಿಕೊಳ್ಳುವುದು. 5) ನಿತ್ಯ ಲಘು ಉಪಾಹಾರ ವ್ಯವಸ್ಥೆ. 6) ಸಮಯ ಸಂಜೆ 4 ರಿಂದ 6. 7) ಎಲ್ಲಾ ಸಂಘಗಳಿಗೆ ಒಂದೇ ತರಹದ ಬ್ಯಾನರ್ ಅಳವಡಿಸುವುದು. (ಅದರ ಪ್ರತಿ ಕಳುಹಿಸಲಾಗುವುದು.)

ಈ ಮೇಲಿನ ಎಲ್ಲಾ ವ್ಯವಸ್ಥೆ ಮಾಡಿಕೊಂಡು ಮಹಾಮಂಡಲಕ್ಕೆ ವರದಿ ನೀಡುವುದು. ಶಿಬಿರದ ಪುರೋಹಿತರ ಖರ್ಚು ಮಹಾಮಂಡಲದಿಂದ ಭರಿಸಲಾಗುವುದು. ಜಪ ಪುಸ್ತಕ ಮತ್ತು ಪೂಜಾ ಪದ್ಧತಿ ಪುಸ್ತಕವನ್ನು ನಿಮ್ಮ ಬೇಡಿಕೆಯಂತೆ ಪೂರೈಸಲಾಗುವುದು.

– ಅಧ್ಯಕ್ಷರು ಮತ್ತು ಕಾರ್ಯದರ್ಶಿ ಹಾಗೂ ಕೋಶಾಧಿಕಾರಿ
ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ. ಮಂಗಳೂರು (ರಿ).

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘ ಸುಳ್ಯ

ಇದರ ಆಶ್ರಯದಲ್ಲಿ

ಪ್ರಥಮ ವರುಷದ ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಯ 10 ತಂಡಗಳ ಓವರ್ ಅರ್ಮ್ ಲೀಗ್ ಪಂದ್ಯಾಟ.

## "ಸ್ಥಾನಿಕ ಪ್ರೀಮಿಯರ್ ಲೀಗ್" 2024

ದಿನಾಂಕ : 05.05.2024, ಆದಿತ್ಯವಾರ ಸ್ಥಳ : ಸುಳ್ಯ

ಪ್ರಥಮ : ರೂ. 9999 ಹಾಗೂ ಸ್ಥಾನಿಕ ಪ್ರೀಮಿಯರ್ ಲೀಗ್ ಟ್ರೋಫಿ
ದ್ವಿತೀಯ : ರೂ. 7777 ಹಾಗೂ ಸ್ಥಾನಿಕ ಪ್ರೀಮಿಯರ್ ಲೀಗ್ ಟ್ರೋಫಿ

### ವೈಯಕ್ತಿಕ ಬಹುಮಾನಗಳು :

ಉತ್ತಮ ಬ್ಯಾಟ್ಸ್‌ಮನ್, ಉತ್ತಮ ಬೌಲರ್, ಉತ್ತಮ ಕ್ಷೇತ್ರ ರಕ್ಷಕ
ಸರಣಿ ಶ್ರೇಷ್ಠ, ಫೈನಲ್ ಪಂದ್ಯಾಟದ ಪಂದ್ಯಶ್ರೇಷ್ಠ
ಪಂದ್ಯಾವಳಿಯ ಶಿಸ್ತುಬದ್ಧ ತಂಡವನ್ನು ಸ್ಮರಣಿಕೆ ನೀಡಿ ಗೌರವಿಸಲಾಗುವುದು.

### ಮಹಿಳೆಯರ ತ್ರೋಬಾಲ್ ಪಂದ್ಯಾಟ

ಪ್ರಥಮ : ರೂ.5000/– ದ್ವಿತೀಯ : ರೂ.3000/–

ಪಂದ್ಯಾಟದ ನಿಯಮಗಳು :

1. 5 ಓವರ್‌ನ ಪಂದ್ಯಾಕೂಟ ಆಗಿರುತ್ತದೆ. ಸಮಯದ ಅಭಾವ ಕಂಡು ಬಂದಲ್ಲಿ 3 ಓವರ್‌ಗೆ ಸೀಮಿತ ಆಗಿರುತ್ತದೆ.
2. ಯಾವುದೇ ಚರ್ಚೆಗೆ ಅವಕಾಶ ಇಲ್ಲ. ಅಂಪೈರ್ ಹಾಗೂ ವ್ಯವಸ್ಥಾಪಕರ ತೀರ್ಮಾನವೇ ಅಂತಿಮ ತೀರ್ಮಾನ ಆಗಿರುತ್ತದೆ.
3. ಪಂದ್ಯಾಟ ಸಮಬಲ ಆದಲ್ಲಿ ನಾಣ್ಯ ಚಿಮ್ಮುವಿಕೆಯಲ್ಲಿ ವಿಜೇತ ತಂಡವನ್ನು ಆಯ್ಕೆ ಮಾಡಲಾಗುವುದು.
4. ಯಾವುದೇ ತ್ರೋ ಬಾಲ್ ಅವಕಾಶವಿರುವುದಿಲ್ಲ.
5. ಪಂದ್ಯಾಟ 7.00ಕ್ಕೆ ಪ್ರಾರಂಭವಾಗುತ್ತದೆ .
6. ತಂಡಗಳನ್ನು ಎ ಪೂಲ್ ಮತ್ತು ಬಿ ಪೂಲ್ ಮಾಡಿ ಆಡಿಸಲಾಗುವುದು.
7. ಪ್ರತಿ ಆಟಗಾರರ ಆಧಾರ್ ಕಾರ್ಡ್ ಝೆರಾಕ್ಸ್ ಕಡ್ಡಾಯ.
8. ದಿನಾಂಕ 25.04.2024ರ ಮುಂಚಿತವಾಗಿ 10 ತಂಡಗಳು ಹೆಸರನ್ನು ನೋಂದಾಯಿಸತಕ್ಕದ್ದು.

ಮೊದಲ 10 ತಂಡಗಳಿಗೆ ಮಾತ್ರ ಅವಕಾಶ

| ಪ್ರದೀಪ್ ರಾವ್ | ಸಾಕ್ಷಿತ್ ರಾವ್ | ಅರ್ಜುನ್ ರಾವ್ |
|---|---|---|
| 8095439248 | 9481238322 | 96866 54016 |






**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಕೆ. ದಿನಮಣಿ ಶಾಸ್ತ್ರೀ
ಮೊಬೈಲ್ : 8277190632
9482284970





**ಚಿತ್ತಾರ ಫೋಟೋ ಆರ್ಟ್**
ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ
ಚಿತ್ತಾರ, 3/96, ಸರ್ವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ–576213.

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

ಪ್ರೊ : ನಯನಾಭಿರಾಮ ಸ್ವಾಮಿ
ಮೊಬೈಲ್ : 9449101303, 9632500864
**ಉದಯಾದ್ರಿ ಕೇಟರರ್ಸ್**
ಉಮಾಮಹೇಶ್ವರ ಉದಯಾದ್ರಿ ಮಠ,
ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ,
"ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.
ಮದುವೆ ಇನ್ನಿತರ ಸಮಾರಂಭಗಳಿಗೆ ಶುಚಿರುಚಿಯಾದ ಅಡುಗೆ ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ ಪಡಿಸಿಕೊಳ್ಳಬಹುದು.

**Buying and selling shares as easy as checking your emails**
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಶಾರದಾ ಮಹಿಳಾ ಮಂಡಲಿಯವರಿಂದ ವಸಂತ ನವರಾತ್ರಿ

ಏಪ್ರಿಲ್ 9ರಿಂದ ಏಪ್ರಿಲ್ 17ರ ವರೆಗೆ ನಡೆಯುವ ವಸಂತ ನವರಾತ್ರಿಯ ಸಂದರ್ಭದಲ್ಲಿ ಶಾರದಾ ಮಹಿಳಾ ಮಂಡಲಿಯವರಿಂದ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರತೀದಿನ ಶ್ರೀ ಲಲಿತಾ ಸಹಸ್ರನಾಮ ಪಾರಾಯಣ, ಅರ್ಚನೆ ಹಾಗೂ ಭಜನಾ ಕಾರ್ಯಕ್ರಮಗಳು ನಡೆಯಲಿರುವುದು. ತಾ.17.04.2024ರಂದು ಶ್ರೀ ರಾಮನವಮಿಯ ಕಾರ್ಯಕ್ರಮವು ಜರಗಲಿರುವುದು.

## ಶುಭ ವಿವಾಹ

ಶ್ರೀಮತಿ ನಾಗರತ್ನ ಮತ್ತು ದಿ| ನಾಗರಾಜ ಬಾರ್ಕೂರು ದಂಪತಿಯ ಪುತ್ರ **ಚಿ| ರಾಮಚಂದ್ರ ಬಾರ್ಕೂರು** ಅವರ ವಿವಾಹವು ಶ್ರೀಮತಿ ವೀಣಾ ಮತ್ತು ಡಿ.ಎಸ್. ನಟರಾಜ್ ದಂಪತಿಯ ಪುತ್ರಿ **ಚಿ| ಸೌ| ಭೂಮಿಕಾ**ರವರೊಂದಿಗೆ ತಾ.17.03.2024ರಂದು ಬಂಗಾರಪೇಟೆಯ ಆರ್.ಆರ್. ಕನ್ವೆನ್ಷನ್ ಹಾಲ್‌ನಲ್ಲಿ ಜರಗಿತು.

**** ****

ಕಿಗ್ಗಾ ಶ್ರೀಮತಿ ಸುವರ್ಣ ಮತ್ತು ವಿಜಯಕುಮಾರ್ ದಂಪತಿಯ ಪುತ್ರ **ಚಿ| ಕಿರಣ್** ಕುಮಾರ್ ಕೆ. ವಿ. ಅವರ ವಿವಾಹವು ಕೊರಂಗ್ರಪಾಡಿ ಶ್ರೀಮತಿ ಸಹನಾ ಮತ್ತು ಮಂಜುನಾಥ್ ರಾವ್ ದಂಪತಿಯ ಪುತ್ರಿ **ಚಿ| ಸೌ| ಮಾನಸ**ರವರೊಂದಿಗೆ ತಾ.03.04.2024ರಂದು ಉಡುಪಿ ಚಿತ್ಪಾಡಿ ಸರಸ್ವತಿ ಸಭಾಭವನದಲ್ಲಿ ಜರಗಿತು.

**** ****

ಇನ್ನ ಕೇದಗೆ ರಾಮಚಂದ್ರ ರಾವ್ ಮತ್ತು ಶ್ರೀಮತಿ ಅನುಸೂಯ ದಂಪತಿಯ ಪುತ್ರಿ **ಚಿ| ಸೌ| ಚೈತ್ರ** ಅವರ ವಿವಾಹವು ಪಡುಬಿದ್ರಿ ಗಣಪತಿ ಮತ್ತು ಶ್ರೀಮತಿ ಸ್ವಾತಿ ದಂಪತಿಯ ಪುತ್ರ **ಚಿ| ವರುಣ್ ರಾವ್**‌ರವರೊಂದಿಗೆ ತಾ.03.04.2024ರಂದು ಕೇರ್ಪಳ್ಳ ಶ್ರೀ ದುರ್ಗಾಪರಮೇಶ್ವರಿ ಕಲ್ಯಾಣ ಮಂಟಪ ಸುಳ್ಯದಲ್ಲಿ ಜರಗಿತು.

## ಬ್ರಹ್ಮೋಪದೇಶ

ಶ್ರೀಮತಿ ರೂಪಶ್ರೀ ರಾವ್ ಮತ್ತು ಮುಕುಂದ ರಾವ್ ದಂಪತಿಯ ಪುತ್ರ (ಶ್ರೀಮತಿ ಮಲ್ಲಿಕಾ ಮತ್ತು ಭವಾನಿಶಂಕರ ರಾವ್ ಪಡುಬೆಳ್ಳೆ ಹಾಗೂ ಶ್ರೀಮತಿ ಸೀತಾದೇವಿ ಮತ್ತು ದಿ| ಪಿ.ಡಿ. ಭಾಸ್ಕರ್ ರಾವ್ ಪಡುಬಿದ್ರಿ ದಂಪತಿಯ ಮೊಮ್ಮಗ) **ಚಿ| ಆರವ್**‌ನ ಬ್ರಹ್ಮೋಪದೇಶವು ತಾ.27.03.2024ರಂದು "ಶ್ರೀ ಶಾರದಾ ಮಂಟಪ", ಕುಂಜಿಬೆಟ್ಟು, ಉಡುಪಿಯಲ್ಲಿ ಜರಗಿತು.

**** ****

ಶ್ರೀಮತಿ ಮಂಜುಳಾ ಮತ್ತು ಸುಬ್ರಹ್ಮಣ್ಯ ಶಾಸ್ತ್ರಿ ದಂಪತಿಯ ಪುತ್ರ **ಚಿ| ಸಾತ್ವಿಕ**ನ ಬ್ರಹ್ಮೋಪದೇಶವು ತಾ.28.03.2024 ರಂದು ಕಲ್ಲಮ ಶ್ರೀ ರಾಘವೇಂದ್ರ ಮಠ, ಪುತ್ತೂರಿನಲ್ಲಿ ಜರಗಿತು.

**** ****

ಡಾ| ಚೈತನ್ಯ ಮತ್ತು ಸತೀಶ್ಚಂದ್ರ ದಂಪತಿಯ ಪುತ್ರ **ಚಿ| ಸಮನ್ವಯ ಸತೀಶ್** (ಡಾ| ಯಾಜಿ ದಿವಾಕರ್ ಭಟ್ ಮತ್ತು ಶ್ರೀಮತಿ ಸಾವಿತ್ರಿ ದಂಪತಿಯ ಮೊಮ್ಮಗ) ಉಪನಯನವು ತಾ.04.04.2024 ರಂದು ದೀನಬಂಧು ಕೃಷ್ಣ ದೇವಸ್ಥಾನ ಬೆಂಗಳೂರಿನಲ್ಲಿ ನೆರವೇರಿತು.

**** ****

ಏರ್ಮಾಳು ಮೋಹನ್ ರಾವ್ ಮತ್ತು ದಿ| ಉಷಾ ದೇವಿಯವರ ಹಾಗೂ ಹೆರ್ಮುಂಡೆ ಪ್ರಕಾಶ್ ಭಾಗವತ್ ಮತ್ತು ಶ್ರೀಮತಿ ಜಯಲಕ್ಷ್ಮೀಯವರ ಪೌತ್ರ, ಶ್ರೀಮತಿ ಪ್ರಿಯಾ ಭಾಗವತ್ ಮತ್ತು ದೀಪಕ್ ರಾವ್ ದಂಪತಿಯ ಪುತ್ರ **ಚಿ| ವಿವಾನ್**‌ನ ಬ್ರಹ್ಮೋಪದೇಶವು ತಾ.04.04.2024ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

## ಕೊಡುಗೆ

ಶ್ರೀ ಬಿ.ಹರಿಶ್ಚಂದ್ರ ರಾವ್ ಉಡುಪಿ ಇವರು ಶಾರದಾ ಮಹಿಳಾ ಮಂಡಲದ ಭಜನಾ ಕಾರ್ಯಕ್ರಮವನ್ನು ನಡೆಸಿಕೊಡಲು ಅನುಕೂಲವಾಗುವಂತೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘಕ್ಕೆ ಜಮಖಾನವನ್ನು ಕೊಡುಗೆಯಾಗಿ ನೀಡಿರುತ್ತಾರೆ. ಅವರಿಗೆ ಅಭಿನಂದನೆಗಳು.

## ವಿಳಾಸ ಬದಲಾವಣೆ

**ಆನಂದ ಕುಮಾರ್**
36, 15ನೇ ಕ್ರಾಸ್,
ವಿ.ವಿ. ಮೊಹಲ್ಲಾ,
ಮೈಸೂರು-570002


*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com





## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.27-04-2024 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.28-04-2024 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.29-04-2024 ಹಾಗೂ 12.05.2024 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮೇಷ ಮಾಸದ ವಿಶೇಷ ದಿನಗಳು

| | | | |
|---|---|---|---|
| 13.04.2024 | ಮೇಷ ಸಂಕ್ರಮಣ | 04.05.2024 | ಸರ್ವೈಕಾದಶೀ |
| 14.04.2024 | ಸೌರ ಯುಗಾದಿ | 08.05.2024 | ಅಮಾವಾಸ್ಯೆ, ಶುಕ್ರಾಸ್ತ |
| 17.04.2024 | ಶ್ರೀ ರಾಮನವಮಿ | 09.05.2024 | ವಸಂತ ಋತು, ವೈಶಾಖ ಮಾಸದ ಶುಕ್ಲ ಪಕ್ಷಾರಂಭ, ಗುರ್ವಸ್ತ |
| 19.04.2024 | ಸರ್ವೈಕಾದಶೀ | 10.05.2024 | ಅಕ್ಷಯ ತೃತೀಯಾ |
| 23.04.2024 | ಹುಣ್ಣಿಮೆ | 12.05.2024 | ಶ್ರೀ ಶಂಕರ ಜಯಂತಿ, ಶ್ರೀ ರಾಮಾನುಜ ಜಯಂತಿ |
| 24.04.2024 | ವಸಂತ ಋತು, ಚೈತ್ರ ಮಾಸದ ಕೃಷ್ಣ ಪಕ್ಷಾರಂಭ | 14.05.2024 | ವೃಷಭ ಸಂಕ್ರಮಣ |
| 27.04.2024 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.51ಕ್ಕೆ | 19.05.2024 | ಸರ್ವೈಕಾದಶೀ |

## ನಿಧನ



ಮಂಗಳೂರು ಶಿವಭಾಗ್ ನಿವಾಸಿ ದಿ| ಸುರತ್ಕಲ್ ಕಂಪೌಂಡರ್ ಕೃಷ್ಣ ಅವರ ಧರ್ಮಪತ್ನಿ ಶ್ರೀಮತಿ ರಾಜೀವಿ ಟೀಚರ್ ಅವರು 84ನೇ ವಯಸ್ಸಿನಲ್ಲಿ ತಾ.21.03.2024ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



ದಿ| ಪೇರೂರು ಶಂಕರನಾರಾಯಣರಾಯರ ಧರ್ಮಪತ್ನಿ ಶ್ರೀಮತಿ ಸರಸ್ವತಿ ಯಾನೆ ಸರೋಜ ಅವರು 90ನೇ ವಯಸ್ಸಿನಲ್ಲಿ ತಾ.22.03.2024ರಂದು ಪೇರೂರಿನ ಸ್ವಗೃಹದಲ್ಲಿ ನಿಧನರಾದರು. ಅವರು ಒಬ್ಬ ಪುತ್ರ ಹಾಗೂ ನಾಲ್ಕು ಪುತ್ರಿಯರನ್ನು ಅಗಲಿದ್ದಾರೆ.

**** ****



ಮಂಗಳೂರಿನ ಕದ್ರಿಯ ನಿವಾಸಿ ಹೆಚ್. ಕುಮಾರಸ್ವಾಮಿಯವರು 86ನೇ ವಯಸ್ಸಿನಲ್ಲಿ ತಾ.27.03.2024 ರಂದು ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಹಾಗೂ ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಕಾಂತಾವರ ಭೋಜ ರಾವ್ ಮತ್ತು ಸುಂದರಮ್ಮ ಅವರ ಎರಡನೆಯ ಪುತ್ರ ಭಾಸ್ಕರರವರು 57ನೇ ವಯಸ್ಸಿನಲ್ಲಿ ತಾ.01-04-2024ರಂದು ನಿಧನರಾದರು. ಅವರು ಪತ್ನಿ ಸುಜಾತ, ಪುತ್ರ ಮತ್ತು ಮನೆಯವರನ್ನು ಅಗಲಿದ್ದಾರೆ.

**** ****



ಬೈಕಾಡಿ ಸತ್ಯನಾರಾಯಣ ರಾವ್ ಮತ್ತು ಶ್ರೀಮತಿ ವಿಮಲಾ ಎಸ್. ರಾವ್ ದಂಪತಿಯ ಪುತ್ರ ನವೀನ್ ಎಸ್. ರಾವ್ ಅವರು 34ನೇ ವಯಸ್ಸಿನಲ್ಲಿ ತಾ.08.04.2024 ರಂದು ಹೃದಯಾಘಾತದಿಂದ ನಿಧನರಾದರು. ಅವರು ಪತ್ನಿ ಮತ್ತು ಪೋಷಕರನ್ನು ಅಗಲಿದ್ದಾರೆ.


Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.




## ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾದ ತಿಂಗಳ ಸಭೆ



ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾದ ತಿಂಗಳ ಸಭೆ ಮಾರ್ಚ್ 10ನೇ ದಿನಾಂಕದಂದು ನಡೆಯಿತು. ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಉಪಾಧ್ಯಕ್ಷರಾದ ಪ್ರಭಾಕರ್ ರಾವ್, ಪ್ರಧಾನ ಕಾರ್ಯದರ್ಶಿ ಮುರಳಿಧರ್ ಶರ್ಮ, ಕೋಶಾಧಿಕಾರಿ ಉದಯ ಕುಮಾರ್ ಬಾರ್ಕೂರು, ಜೊತೆ ಕಾರ್ಯದರ್ಶಿ ಕೇಶವ ರಾವ್ ಹಾಗೂ ಬಂಟ್ವಾಳದಿಂದ ಪ್ರತಿನಿಧಿ ಸಂತೋಷ ರಾವ್ ಕಾವಲಕಟ್ಟೆ ಹಾಗೂ ಪಡುಬಿದ್ರಿ ಸಂಘದ ಅಧ್ಯಕ್ಷರಾದ ಎಂ.ಕೆ.ಮೋಹನ ರಾವ್ ಇವರೆಲ್ಲರೂ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಹಾಮಂಡಲದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್‌ರವರು 19 ಸಂಘಗಳ ಭೇಟಿ ಕಾರ್ಯಕ್ರಮದಲ್ಲಿ ಮಾತನಾಡಿ ಮಂಡಲದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಮತ್ತು ಕಂಪ್ಯೂಟರ್ ದಾಖಲೆ ಮಾಡುವ ಕುರಿತು ಮಾಹಿತಿ ನೀಡಿದರಲ್ಲದೆ ಎಲ್ಲಾ ಸಂಘಗಳ ಸಮಸ್ಯೆಗಳ ಕುರಿತು ಸೂಕ್ತ ಯೋಜನೆಗಳನ್ನು ರೂಪಿಸುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಸಂಘದ ಸಂಚಾಲಕರಾದ ಎಮ್.ಕೆ. ದಿವಾಕರ ರಾವ್, ಕೋಶಾಧಿಕಾರಿ ಅರವಿಂದ ರಾವ್ ಹಾಗೂ ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು. ಜನಾರ್ದನ್ ರಾವ್ ಸ್ವಾಗತಿಸಿ, ಅರುಣ್ ಕುಮಾರ್ ಧನ್ಯವಾದವನ್ನು ನೀಡಿದರು.

## ವೈವಾಹಿಕ ಸುವರ್ಣ ಸಂಭ್ರಮಾಚರಣೆ

ಉಚ್ಚಿಲ ಸುಬ್ಬರಾವ್ ಶ್ಯಾನುಭಾಗ್ (ದಿ| ಉಚ್ಚಿಲ ಕೃಷ್ಣರಾವ್ ಶ್ಯಾನುಭಾಗ್‌ರ ಸುಪುತ್ರ) ಹಾಗೂ ಶ್ರೀಮತಿ ಸುಮಿತ್ರ ಎಸ್ ಶ್ಯಾನುಭಾಗ್ ಇವರ ವೈವಾಹಿಕ ಸುವರ್ಣ ಸಂಭ್ರಮ ಆಚರಣೆಯು ದಿ.20.03.2024ರಂದು ಪಡುಬಿದ್ರೆ ಪಾದೆಬೆಟ್ಟುವಿನ ಅವರ ಸ್ವಗೃಹ "ಸ್ಕಂದ ನಿಲಯ"ದಲ್ಲಿ ಬೆಳಿಗ್ಗೆ ಗಣಹೋಮ, ಮಧ್ಯಾಹ್ನ ಶ್ರೀ ಸತ್ಯನಾರಾಯಣ ಪೂಜೆಯೊಂದಿಗೆ ನೆರವೇರಿತು.

ಮಕ್ಕಳಾದ ಶ್ರೀಮತಿ ಜಯಶ್ರೀ ಕೃಷ್ಣಪ್ರಸಾದ್, ಶ್ರೀಮತಿ ಶ್ರೀಲತಾ ವಿನೋದ್, ಶ್ರೀಮತಿ ಸೌಮ್ಯಶ್ರೀ ವಿಜೇತ್ ಅಲ್ಲದೆ ಅಳಿಯಂದಿರು, ಮೊಮ್ಮಕ್ಕಳು ಮತ್ತು ತಮ್ಮ ಬಂಧು ಬಾಂಧವರ ಜೊತೆಯಾಗಿ ಆಚರಿಸಲ್ಪಟ್ಟ ಈ ಸಂಭ್ರಮಾಚರಣೆಯಲ್ಲಿ ಬ್ರಾಹ್ಮಣ ಸುಹಾಸಿನಿ ಆರಾಧನೆ ಅಲ್ಲದೆ ಸಂಜೆ ಪಡುಬಿದ್ರೆಯ ಸ್ಥಾನಿಕ ಸಮಾಜದವರಿಂದ ಮಹಿಳಾ ಭಜನಾ ತಂಡದಿಂದ ಭಜನಾ ಕಾರ್ಯಕ್ರಮವೂ ನೆರವೇರಿತು.


**ಶ್ರೀ ಕ್ಷೇತ್ರ ಉದಯಾದ್ರಿ**

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನ**

ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ – 574111

ಸ್ವಸ್ತಿ| ಶ್ರೀ ಕ್ರೋಧಿ ನಾಮ ಸಂವತ್ಸರದ ಮೇಷ ಮಾಸ ದಿನ ೧೫ ಸಲುವ

ದಿನಾಂಕ 28.04.2024ನೇ ಆದಿತ್ಯವಾರದಂದು

**ಶ್ರೀ ಕ್ಷೇತ್ರದ ತಂತ್ರಿಗಳು ಹಾಗೂ ಶೃಂಗೇರಿ ಶಾರದಾ ಪೀಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ**

**ಪ್ರತಿಷ್ಠಾ ವರ್ಧಂತ್ಯುತ್ಸವವು**

ಜರಗಲಿರುವುದು. ಶ್ರೀ ದೇವತಾ ಕಾರ್ಯಕ್ರಮದಲ್ಲಿ ಭಕ್ತಾದಿಗಳಾದ ತಾವೆಲ್ಲರೂ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಗಂಧ-ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಜಗದಭಿರಾಮ ಸ್ವಾಮಿ**
ಅನುವಂಶಿಕ ಮೊಕ್ತೇಸರರು ಮತ್ತು ಪ್ರಧಾನ ಅರ್ಚಕರು

**ಪಿ.ಡಿ. ಶೇಖರ ರಾವ್**
ಅಧ್ಯಕ್ಷರು

**ಕರುಣಾಕರ ಬೆಳ್ಳೆ**
ಗೌರವ ಅಧ್ಯಕ್ಷರು

**ಶ್ರೀನಿವಾಸ ಶರ್ಮ ಪಾದೆಬೆಟ್ಟು**
ಕೋಶಾಧಿಕಾರಿ

**ನಯನಾಭಿರಾಮ ಸ್ವಾಮಿ**
ಕಾರ್ಯದರ್ಶಿ

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ಟೆಂಪಲ್ ಟ್ರಸ್ಟ್ (ರಿ.)**
**ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು**


## ಕೊಲ್ಲಿ ಶ್ರೀ ದುರ್ಗಾಪರಮೇಶ್ವರಿ (ಶ್ರೀ ದುರ್ಗಾದೇವಿ) ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ




ಬೆಳ್ತಂಗಡಿಯ ಕಿಲ್ಲೂರಿನ ಕೊಲ್ಲಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನಡೆದ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ತಾ.26.03.2024ರ ಸಂಜೆ ನಡೆದ ಧಾರ್ಮಿಕ ಸಭಾಕಾರ್ಯಕ್ರಮದಲ್ಲಿ ಮುಖ್ಯಭಾಷಣಕಾರರಾಗಿ ಕಜಂಪಾಡಿ ಸುಬ್ರಹ್ಮಣ್ಯ ಭಟ್‌ರವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಶೃಂಗೇರಿ ಮಠದ ಉಡುಪಿ ಪ್ರಾಂತದ ಧರ್ಮಾಧಿಕಾರಿಗಳಾದ ಬ್ರಹ್ಮಶ್ರೀ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿ ಹಾಗೂ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಕೆ. ಮಂಜುನಾಥ ಹೆಬ್ಬಾರ್‌ರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಡಾ| ಬಿ. ಕೆ. ಲೋಕೇಶ್ ರಾವ್‌ರವರು ದೇವಸ್ಥಾನದ ಜೀರ್ಣೋದ್ಧಾರದ ಸಮಿತಿಯ ಅಧ್ಯಕ್ಷರು ಹಾಗೂ ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷರೂ ಆಗಿರುತ್ತಾರೆ.


**ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘ (ರಿ.)**

**ಕಲ್ಲಾರೆ, ಪುತ್ತೂರು & 574201, ದಕ್ಷಿಣ ಕನ್ನಡ**

ಶ್ರೀಮತ್ ಪರಮಹಂಸೇತ್ಯಾದಿ ಸಮಸ್ತ ಬಿರುದಾವಳೀ ವಿರಾಜಮಾನರಾದ
ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ
ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ
**ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ**
**ಮತ್ತು ತತ್ಕರಕಮಲಸಂಜಾತರಾದ**
**ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ**
**ಆಶೀರ್ವಾದದೊಂದಿಗೆ**

ಸ್ವಸ್ತಿ| ಶ್ರೀ ಕ್ರೋಧಿ ಸಂವತ್ಸರದ ಮೇಷ ಮಾಸ ೧೧ ರ ಚೈತ್ರ ಬಹುಳ ಪ್ರತಿಪತ್ ತಾ.24.04.2024ನೇ ಬುಧವಾರ ಸಂಜೆ ಗಂಟೆ 6.30ರ ಶುಭ ಮುಹೂರ್ತದಲ್ಲಿ
**ಪುತ್ತೂರು ಕಲ್ಲಾರೆಯಲ್ಲಿರುವ ನಮ್ಮ ನಿವೇಶನದಲ್ಲಿ ನೂತನವಾಗಿ ನಿರ್ಮಿಸಿರುವ**

**"ಶಿವಕೃಪಾ ಸಭಾಭವನ"ದ ಲೋಕಾರ್ಪಣೆಯನ್ನು**

ಜಗದ್ಗುರು ಶ್ರೀ ಶ್ರೀ ಸನ್ನಿಧಾನಂಗಳವರು ತಮ್ಮ ಅಮೃತಹಸ್ತದಿಂದ ನೆರವೇರಿಸಿ ನಮ್ಮನ್ನು ಅನುಗ್ರಹಿಸಲಿದ್ದಾರೆ. ಈ ಶುಭಸಮಾರಂಭಕ್ಕೆ ತಾವೆಲ್ಲರೂ ಕುಟುಂಬ ಸಮೇತರಾಗಿ ಆಗಮಿಸಿ, ಶ್ರೀ ಜಗದ್ಗುರುಗಳವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಎನ್.ಕೆ. ಜಗನ್ನಿವಾಸ ರಾವ್**
ಅಧ್ಯಕ್ಷರು


**ಎ. ಬಾಲಕೃಷ್ಣ ರಾವ್**
ಕಾರ್ಯದರ್ಶಿ

**ಸತೀಶ್ ರಾವ್ ಪಿ.**
ಉಪಾಧ್ಯಕ್ಷರು

**ಎನ್.ಎಸ್. ನಟರಾಜ**
ಕೋಶಾಧಿಕಾರಿ

ಆಡಳಿತ ಮಂಡಳಿ ಸದಸ್ಯರು ಹಾಗೂ ಸಮಾಜ ಬಾಂಧವರು


**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**



ಭಕ್ತ ಮಹಾಶಯರೇ,

ಶ್ರೀ ಬಾಲಗಣಪತಿ ದೇವರ ಬಲಿ ಮೂರ್ತಿಯ ಪ್ರಭಾವಳಿಯನ್ನು (ಪುಷ್ಪ ಕನ್ನಡಿ) ಬೆಳ್ಳಿಯಿಂದ ರಚಿಸುವುದೆಂದು ತೀರ್ಮಾನಿಸಿದ್ದು, ಅದರಂತೆ ಸಂಬಂಧಪಟ್ಟ ರಚನಾಕಾರರು ತಿಳಿಸಿದಂತೆ ಸುಮಾರು ಮೂರರಿಂದ ನಾಲ್ಕು ಕೆ.ಜಿ. ಬೆಳ್ಳಿ (ಅಂದಾಜು ಮೂರರಿಂದ ನಾಲ್ಕು ಲಕ್ಷ) ಬೇಕೆಂದು ತೀರ್ಮಾನಿಸಿದ್ದಾರೆ. ಈ ಬೆಳ್ಳಿಯ ಪ್ರಭಾವಳಿಯನ್ನು ಮುಂದಿನ ಎಪ್ರಿಲ್ ತಿಂಗಳ 28 ರಂದು ನಡೆಯುವ ಪ್ರತಿಷ್ಠಾ ಮಹೋತ್ಸವದಂದು ಸಮರ್ಪಿಸುವುದೆಂದು ತೀರ್ಮಾನಿಸಲಾಗಿದೆ. ಭಕ್ತಾದಿಗಳು ಬೆಳ್ಳಿ ಅಥವಾ ಧನಸಹಾಯದ ಮೂಲಕ ಈ ಪುಣ್ಯ ಕಾರ್ಯದಲ್ಲಿ ಭಾಗವಹಿಸಿ ಸಹಕರಿಸಬೇಕೆಂದು ವಿನಂತಿಸುತ್ತಿದ್ದೇವೆ.

**– ಆಡಳಿತ ಮಂಡಳಿ.**

# ಶ್ರೀ ಶಾರದಾ ಪತ್ರಿಕೆಯ ರಜತ ಮಹೋತ್ಸವದ ಸಂದರ್ಭದಲ್ಲಿ ಮಹಾಪೋಷಕರಾದವರು

## ಪಿ.ವಿ. ರಮೇಶ್ ಪಾಂಡೇಶ್ವರ್



ಸಾಸ್ತಾನ ಪಾಡೇಶ್ವರದ ದಿ| ವೆಂಕಟ್ರಾವ್ ಪಾಂಡೇಶ್ವರ್ ಮತ್ತು ದಿ| ಕಾವೇರಮ್ಮನವರ ಸುಪುತ್ರ ಪಿ.ವಿ.ರಮೇಶ್‌ರವರು ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿ ಸಹಕರಿಸಿದ್ದಾರೆ.

ಶ್ರೀಯುತರು ಪಾಂಡೇಶ್ವರ ಮತ್ತು ಕೋಟದಲ್ಲಿ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣವನ್ನು ಪೂರ್ಣಗೊಳಿಸಿ, ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿಯನ್ನು ಪಡೆದರು. ನಂತರ ಗೋವಾದಲ್ಲಿ ನೆಲೆಯಾದ ಇವರು 1981ರಲ್ಲಿ ಗೋವಾದ ಎಂ.ಎನ್. ಹೈಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಪ್ರಯೋಗಾಲಯದ ಟೆಕ್ನಿಶಿಯನ್ ಆಗಿ ಕರ್ತವ್ಯಕ್ಕೆ ಸೇರಿದ್ದರು. ಇದೇ ಸಮಯದಲ್ಲಿ ಗೋವಾದ ಕಾರೇ ಸಂಧ್ಯಾ ಕಾನೂನು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಕಾನೂನು ಪದವಿಯನ್ನೂ ಪಡೆದಿರುತ್ತಾರೆ. ಸದ್ಯ ವೃತ್ತಿಯಿಂದ ವಯೋನಿವೃತ್ತಿ ಹೊಂದಿ ಉಡುಪಿಯ ಶ್ರೀ ಶಾರದಾ ಮಂಟಪದ ಬಳಿ ಇರುವ ಮಂಗೇಶ ಟವರ್‌ನಲ್ಲಿ ವಾಸ್ತವ್ಯದಲ್ಲಿದ್ದಾರೆ. ಶ್ರೀಮತಿ ಹೇಮಲತಾರನ್ನು ವಿವಾಹವಾಗಿರುವ ದಂಪತಿಗಳಿಗೆ ಓರ್ವ ಹೆಣ್ಣು (ವಿವಾಹಿತಳಾಗಿ ಧಾರವಾಡದಲ್ಲಿದ್ದಾಳೆ) ಓರ್ವ ಗಂಡು (ವಿವಾಹಿತನಾಗಿ ವಿದೇಶದಲ್ಲಿ ಉದ್ಯೋಗಿಯಾಗಿದ್ದಾನೆ) ಮಕ್ಕಳೊಂದಿಗೆ ಸುಖ ಜೀವನ ನಡೆಸುತ್ತಿದ್ದಾರೆ. ಪಿ.ವಿ. ರಮೇಶ್ ರಾವ್ ದಂಪತಿಗಳಿಗೆ ಹಾಗೂ ಅವರ ಮನೆಯವರಿಗೆ ಇನ್ನಷ್ಟು ಸುಖ ಶಾಂತಿ ಸಿಗಲಿ ಎಂದು ಶ್ರೀ ಶಾರದಾ ಹಾರೈಕೆ.

## ಉಮೇಶ್ ರಾವ್ ಎರ್ಮಾಳು




ಮೈಸೂರಿನಲ್ಲಿ ವಾಸ್ತವ್ಯದಲ್ಲಿರುವ ಉಮೇಶ್ ರಾವ್ ಎರ್ಮಾಳ್ ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿ ಸಹಕರಿಸಿದ್ದಾರೆ. ದಿ| ವೈ ಗೋವಿಂದ ರಾವ್ ಹಾಗೂ ದಿ| ಪದ್ಮಾವತಿ ದಂಪತಿಗಳ 6 ಪುತ್ರರು, 3 ಪುತ್ರಿಯರಲ್ಲಿ 5ನೇಯುವರಾದ ಶ್ರೀ ಉಮೇಶ್ ರಾವ್ ಎರ್ಮಾಳ್ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಎರ್ಮಾಳಿನಲ್ಲಿಯೂ, ಪ್ರೌಢ ವಿದ್ಯಾಭ್ಯಾಸವನ್ನು ಅದಮಾರಿನ ಪೂರ್ಣಪ್ರಜ್ಞಾ ಹೈಸ್ಕೂಲಿನಲ್ಲಿಯೂ, ಬಿಕಾಂ ಪದವಿಯನ್ನು ಮೂಲ್ಕಿಯ ವಿಜಯಾ ಕಾಲೇಜಿನಲ್ಲಿಯೂ ಪಡೆದು ನಂತರ ಧಾರವಾಡದ ಕರ್ನಾಟಕ ಯುನಿವರ್ಸಿಟಿಯಲ್ಲಿ ಎಂಕಾಂ ಪದವೀಧರರಾದರು. ವಿದ್ಯಾಭ್ಯಾಸದ ನಂತರ ಮಂಗಳೂರು ಕದ್ರಿಯ ಕರ್ನಾಟಕ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಜೀವನ ಪ್ರಾರಂಭಿಸಿ ನಂತರ ವರ್ಗಾವಣೆಗೊಂಡು ಮೈಸೂರಿನ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕರ್ತವ್ಯದಲ್ಲಿದ್ದರು. ಹಾಗೆಯೇ ಹಲವು ವರ್ಷಗಳ ಕಾಲ ಹಾಸನದ ಸರಕಾರಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕಮರ್ಶಿಯಲ್ ಪ್ರಾಕ್ಟೀಸ್ ವಿಭಾಗದ ಎಚ್ ಓ ಡಿ ಆಗಿ ಕಾರ್ಯನಿರ್ವಹಿಸಿ ಬೆಂಗಳೂರಿನ ಸರಕಾರಿ ಆರ್ ಸಿ ಇನ್ಸಿಟ್ಯೂಟ್ ಆಫ್ ಬ್ಯುಸಿನೆಸ್ ಮೆನೇಜ್‌ಮೆಂಟ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ವಯೋನಿವೃತ್ತಿ ಹೊಂದಿದರು. ಇವರ ಕಾರ್ಯದಕ್ಷತೆ ಮತ್ತು ವೃತ್ತಿಪರತೆಯ ಕೌಶಲ್ಯದಿಂದ ನಿವೃತ್ತಿಯ ನಂತರ ಸುಮಾರು 12 ವರ್ಷಗಳ ಕಾಲ ಮೈಸೂರಿನ ವಿದ್ಯಾವಿಕಾಸ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾಲೇಜನ್ನು ಮುನ್ನಡೆಸಿದರು. ಕೇಂದ್ರ ಸರಕಾರದ ಡಿಎಫ್‌ಆರ್‌ಎಲ್ ಸಂಸ್ಥೆ ಮೈಸೂರಿನಲ್ಲಿ ಪರ್ಸನಲ್ ಸೆಕ್ರೆಟರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಪುಷ್ಪಾ ಯು ರಾವ್(ಈಗ ನಿವೃತ್ತರು) ರನ್ನು 1980ರಲ್ಲಿ ವಿವಾಹವಾದ ಶ್ರೀ ಉಮೇಶ್ ರಾವ್ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳು. ಹಿರಿಯ ಮಗಳಾದ ಸ್ಮಿತಾರಾವ್(ಡೆಂಟಿಸ್ಟ್) ಅಳಿಯ ರೋಹಿತ್ ರಾವ್ ಸುಪ್ರಿಂ ಕೋರ್ಟ್ ವಕೀಲರು. ಕಿರಿಯ ಮಗಳಾದ ಶ್ವೇತಾ ರಾವ್ ಹಾಗೂ ಅಳಿಯ ಸುಮೋದ್ ಇಬ್ಬರೂ ಎಂಬಿಎ ಪದವೀಧರರಾಗಿದ್ದು ಕೆನಡಾ ದೇಶದಲ್ಲಿ ಇನ್‌ಫೋಸಿಸ್ ಸಂಸ್ಥೆಯ ಉದ್ಯೋಗಿಗಳು. ಇಬ್ಬರು ಮಕ್ಕಳಿಂದ ಒಟ್ಟು ನಾಲ್ವರು ಮೊಮ್ಮಕ್ಕಳ ಸಹಿತ ಸುಖ ಸಂಸಾರವನ್ನು ನಿರ್ವಹಿಸುತ್ತಿದ್ದಾರೆ. ಶ್ರೀ ಉಮೇಶ್ ರಾವ್ ಎರ್ಮಾಳು ಹಾಗೂ ಶ್ರೀಮತಿ ಪುಷ್ಪಾ ಯು ರಾವ್ ದಂಪತಿಗಳಿಗೆ ಮತ್ತು ಅವರ ಮನೆಯವರಿಗೆ ಮುಂದಿನ ಜೀವನದಲ್ಲಿ ಇನ್ನಷ್ಟು ನೆಮ್ಮದಿ, ಶಾಂತಿ, ಆಯುರಾರೋಗ್ಯವನ್ನು ಶ್ರೀ ಶಾರದಾ ಮಾತೆ ಕರುಣಿಸಲಿ ಎಂದು ಪ್ರಾರ್ಥನೆ.









With Best Compliments From :





SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar